ಆ) ಬಂಗಾರಪೇಟೆ ಪುರಸಭೆಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ 2012–13 ಮತ್ತು 2013–14 ನೇ ಸಾಲಿನಲ್ಲಿ ಎಸ್.ಎಫ್.ಸಿ ಅನುದಾನದಡಿ ₹ 75.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಕೋಲಾರ, ಮಾಲೂರು ಮತ್ತು ಬಂಗಾರಪೇಟೆ ಪಟ್ಟಣಗಳು ಹಾಗೂ ಮಾರ್ಗಮಧ್ಯದ ಹಳ್ಳಿಗಳಿಗೆ ಯು.ಐ.ಡಿ.ಎಸ್.ಎಂ.ಟಿ. ಹಾಗೂ ಯರಗೋಳ್ ಅಣ್ಣೆಕಟ್ಟಿನಿಂದ ಕುಡಿಯುವ ನೀರು ಸರಬರಾಜು ಮಾಡುವ ₹ 79.92 ಮತ್ತು 160.00 ಕೋಟಿಗಳಿಗೆ ಯೋಜನೆಗಳು ಮಂಜೂರಾಗಿದ್ದು, ಪ್ರಗತಿಯಲ್ಲಿವೆ.

ಮಾರ್ಕಂಡೇಯ ನದಿಗೆ ಅಡ್ಡಲಾಗಿ ಯರಗೋಳು ಗ್ರಾಮದ ಬಳಿ ಅಣೆಕಟ್ಟಿನ ನಿರ್ಮಾಣದ ಕಾಮಗಾರಿಯೂ ಸಹ ಪ್ರಗತಿಯಲ್ಲಿವೆ. ಸದರಿ ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಿ ಬಂಗಾರಪೇಟೆ ಪಟ್ಟಣಕ್ಕೆ ನೀರು ಸರಬರಾಜು ಮಾಡಲಾಗುವುದು.

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ.

ಕೋಲಾರ ಜಿಲ್ಲೆಯ ರೈತರು ಬೆಳೆದ ತರಕಾರಿಗಳಿಗೆ ವೈಜ್ಞಾನಿಕ ಬೆಲೆ ನಿಗದಿ

86(125); ಶ್ರೀ ನಾರಾಯಣಸ್ವಾಮಿ ಎಸ್.ಎನ್(ಬಂಗಾರಪೇಟೆ)

ಅ) ಕೋಲಾರ ಜಿಲ್ಲೆಯಲ್ಲಿ ರೈತರು ಬೆಳೆಯುವ ತರಕಾರಿ ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಉದ್ದೇಶ ಇದ್ದಲ್ಲಿ, ಯಾವ ಮಾನದಂಡದ ಮೇಲೆ ಯಾವ ರೀತಿ ಯಾವಾಗ ಬೆಲೆ ನಿಗದಿ ಮಾಡಲಾಗುವುದು;

ಇ) ಸರ್ಕಾರಕ್ಕೆ ವೈಜ್ಞಾನಿಕ ಬೆಲೆ ನಿಗದಿ ಮಾಡುವ ಉದ್ದೇಶ ಇಲ್ಲದಿದ್ದರೆ ರೈತರು ಬೆಳೆದ ತರಕಾರಿಗಳಿಗೆ ಸೂಕ್ತ ಬೆಲೆಗೆ ಪರಿಹಾರವೇನು;

ಈ) ಕೋಲಾರ ಜಿಲ್ಲೆಯ ಬರಗಾಲದ ಪ್ರದೇಶದ ಸಣ್ಣ ರೈತರಿಗೆ ತರಕಾರಿ ಬಿತ್ತನೆ ಬೀಜಗಳನ್ನು ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ರಾಜ್ಯಾದ್ಯಂತ ರೈತರು ಬೆಳೆಯುವ ತರಕಾರಿ ಬೆಳೆಗಳ ಬೆಲೆ ಕುಸಿತ ಉಂಟಾದಾಗ ವೈಜ್ಞಾನಿಕ ಬೆಲೆ ನಿಗದಿಪಡಿಸಲಾಗುವುದು. ಪ್ರಮುಖ ತರಕಾರಿ ಬೆಳೆಗಳಾದ ಈರುಳ್ಳಿ, ಟೊಮ್ಯಾಟೋ, ಮೆಣಸಿಕನಾಯಿ ಹಾಗೂ ಆಲೂಗಡ್ಡೆ ಬೆಳೆಗಳಿಗೆ ಮಾರುಕಟ್ಟೆ ಬೆಲೆ ಕುಸಿತ ಉಂಟಾದಾಗ ಉತ್ಪಾದನಾ ವೆಚ್ಚವನ್ನಾಧರಿಸಿ ವೈಜ್ಞಾನಿಕ ಬೆಲೆ ನಿಗದಿಪಡಿಸಲಾಗುವುದು. 2014–15 ನೇ ಸಾಲಿನಿಂದ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡುವ ಸಲುವಾಗಿ ಕೃಷಿ ಇಲಾಖೆಯು ಕೃಷಿ ಆಯೋಗವನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ

ಈ) ಇಲ್ಲ.

ಕೋಲಾರ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಪ್ರಗತಿ

87(126); ಶ್ರೀ ನಾರಾಯಣಸ್ವಾಮಿ ಎಸ್.ಎನ್.

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಸರ್ಕಾರ ತೋಟಗಾರಿಕೆ ಅಭಿವೃದ್ಧಿಪಡಿಸಲಾಗಿದೆ;

ಆ) ಅಭಿವೃದ್ಧಿಪಡಿಸಿದ್ದರೆ, ಯಾವ ರೀತಿಯ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ;